ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದರ ಬಗ್ಗೆ ಸೂಕ್ತ ಆದೇಶ ಕಳಿಸುತ್ತೇನೆ.

ಅಧ್ಯಕ್ಷರು : ಅವರು ಪ್ರಶ್ನೆ ಬಹಳ ಜಾಸ್ತಿ ಹೇಳಿದರು. ಮೂರು ಜಿಲ್ಲೆಗಳ ಹೊರತಾಗಿ ಬೇರೆ ಎಲ್ಲಾ ಜಿಲ್ಲೆಗಳಲ್ಲಿ ಉರ್ದು ಮೀಡಿಯಂನಲ್ಲಿ ನಡೆಯುತ್ತಾ ಇರತಕ್ಕ ಶಾಲೆಗಳು ಪ್ರತ್ಯೇಕವಾದ ಆಸ್ತಿತ್ವ ಹೊಂದಿದೆ. ಈ ಮೂರು ಜಿಲ್ಲೆಗಳಿಗೆ ಏಕೆ ತಾರತಮ್ಯ ಮಾಡುತ್ತೀರಿ? ಈ ಮೂರು ಜಿಲ್ಲೆಗಳಲ್ಲಿ ಅಂದರೆ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಯೊಳಗೆ ಬರತಕ್ಕ ಈ ಮೂರು ಜಿಲ್ಲೆಗಳಲ್ಲಿ ಕೂಡ ರಾಜ್ಯದ ಇತರ ಭಾಗಗಳಲ್ಲಿರತಕ್ಕ ವ್ಯವಸ್ಥೆಯನ್ನು ಜಾರಿಗೆ ತರುತ್ತೀರಾ ಎಂದು ಕೇಳುತ್ತಿದ್ದಾರೆ. ಆದೇಶ ಕೊಟ್ಟು ತರುತ್ತೇವೆ ಎಂದು ಹೇಳಿ, ಅದಕ್ಕೆ ಏನು ತೊಂದರೆ ಇದೆ?

SRI H.G. GOVINDEGOWDA : We will do it.

SRI QUAMRUL ISLAM : Will you do it from the current academic year?

SRI H.G. GOVINDEGOWDA : Yes.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ ತಮ್ಮ ಪ್ರಶ್ನೆ ಏನು ಇದೆ ಸನ್ಮಾನ್ಯ ಸಚಿವರು ಅದಕ್ಕೆ ಸ್ವಲ್ಪ ಸಮಯ ಕೇಳಿದ್ದಾರೆ. ಅದಷ್ಟು ಬೇಗ ಉತ್ತರ ತರಿಸಿಕೊಡುತ್ತೇನೆ, ಅದು ಸ್ವಲ್ಪ ವ್ಯಾಪಕವಾದ ಪ್ರಶ್ನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆ ಎಂದರೆ ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಇನ್ನೊಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ವ್ಯಾಪಕವಾದ ಪ್ರಶ್ನೆ ಅದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಏನು ಆಗಿದೆ? ಬಹಳ ಪ್ರಾಮುಖ್ಯವಾದ ಸಂಗತಿಗಳು, ತಾವು ಯಾವಾಗ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ನನಗೆ ಏನು ಎಂದರೆ ಸರ್ಕಾರದಲ್ಲಿ ಇನ್‌ಫರ್ಮೇಷನ್ ಇಲ್ಲ ಎಂದರೆ ನನ್ನ ಅಭ್ಯಂತರ ಇಲ್ಲ, ಆದರೆ ನನಗೆ ಅನ್ನಿಸುತ್ತದೆ ಎಂದರೆ ಅದಲ್ಲ ಕಾರಣ. ಸುಮಾರು 175 ಲಕ್ಷ ಈ ಅಧ್ಯಕ್ಷರ ವಿವೇಚನಾ ನಿಧಿಯನ್ನು ಒಂದು ಒಂದೂವರೆ ತಿಂಗಳಲ್ಲಿ ಒಂದೇ ತಾಲ್ಲೂಕಿನಲ್ಲಿ ಖರ್ಚು ಮಾಡಿದ್ದಾರೆ, ಲೆಕ್ಕ ಕೊಡದೆ. ಈ ಪ್ರಶ್ನೆ ಕೇಳಿ ಕೇಳಿ ಸಾಕಾಗಿದೆ. ಈ ಪ್ರಶ್ನೆ ಇಲ್ಲಿ ಕೇಳಿದಾಗ ಇಲ್ಲೂ ಉತ್ತರ ಸಿಗದೇ ಇದ್ದರೆ ಇದಕ್ಕೆ ಯಾವಾಗ ಉತ್ತರ ಸಿಗುತ್ತದೆ?

ಅಧ್ಯಕ್ಷರು : ಈ ಸದನದ ಗಮನಕ್ಕೆ ಬಾರದ ರೀತಿಯಲ್ಲಿ ಪ್ರಶ್ನೆಗೆ ಉತ್ತರ ತಪ್ಪಿಸುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ, ಅಷ್ಟು ಆಶ್ವಾಸನೆಯನ್ನು ತಮಗೆ ಕೊಡುತ್ತೇನೆ. ಅವರು ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಅಥವಾ ನಾಡಿದ್ದು ಅವಕಾಶ ಕೊಡುತ್ತೀರಾ?

ಅಧ್ಯಕ್ಷರು : ನಾಳೆ ಅಥವಾ ನಾಡಿದ್ದು ಅದಷ್ಟು ಬೇಗನೇ ಉತ್ತರ ತರಿಸಿಕೊಡೋಣ.

ಕೋರಮಂಗಲದಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣ

171 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಹೋರಮಂಗಲದ ಬಳಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಉದ್ದೇಶಿತ ಕ್ರೀಡಾಂಗಣಕ್ಕೆ ತಗಲುವ ವೆಚ್ಚವೆಷ್ಟು;

ಇ) ಕ್ರೀಡಾಂಗಣಕ್ಕಾಗಿ ವಶಪಡಿಸಿಕೊಂಡಿರುವ ಜಮೀನೆಷ್ಟು ?

ಈ) ಕ್ರೀಡಾಂಗಣವನ್ನು ಮುಂಬರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ನಿರ್ಮಿಸಲಾಗುತ್ತಿದೆಯೇ ?

ಉ) ಹಾಗಿದ್ದಲ್ಲಿ, ಈ ಒಳಾಂಗಣ ಕ್ರೀಡಾಂಗಣದಲ್ಲಿ ಎಷ್ಟು ಜನರಿಗೆ ಸ್ಥಳಾವಕಾಶ ಒದಗಿಸಲಾಗುವುದು;

ಊ) ಕ್ರೀಡಾಂಗಣ ನಿರ್ಮಾಣಕ್ಕೆ ರಾಜ್ಯ ಸರ್ಕಾರಾ ಕೇಂದ್ರ ಸರ್ಕಾರ ಹಾಗೂ ಖಾಸಗೀಯವರಿಂದ ಎಷ್ಟು ಹಣವನ್ನು ಪಡೆಯಲಾಗುವುದು;

ಋ) ಒಳಾಂಗಣ ಕ್ರೀಡಾಂಗಣಕ್ಕೆ ಕೆಂಪೇಗೌಡ ಒಳಾಂಗಣ ಕ್ರೀಡಾಂಗಣವೆಂದು ನಾಮಕರಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ ?

ೠ) ಕ್ರೀಡಾಂಗಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಹೌದು

ಆ) ರೂ. 6,61,34,680.00

(ರೂಪಾಯಿಗಳು ಆರುಕೋಟಿ ಅರವತ್ತೊಂದು ಲಕ್ಷದ ಮೂವತ್ತುನಾಲ್ಕು ಸಾವಿರದ ಆರುನೂರ ಎಂಬತ್ತುಗಳು ಮಾತ್ರ.)

ಇ) 4.35 ಎಕರೆ

ಈ) ಹೌದು

ಉ) 2,000 ಜನರಿಗೆ

ಊ) ಈ ಕ್ರೀಡಾಂಗಣಗಳ ನಿರ್ಮಾಣ ಕಾರ್ಯವೂ ಸೇರಿದಂತೆ ರಾಷ್ಟ್ರೀಯ ಕ್ರೀಡೆಗಳ ಎಲ್ಲಾ ಪೂರ್ವಭಾವಿ ಸಿದ್ಧತೆಗಳಿಗೆ ಅಂದಾಜು ರೂ. 60.00 ಕೋಟಿಗಳ ಹಣದ ಅವಶ್ಯಕತೆಯಿದ್ದು, ಈ ಹಣವನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಪ್ರಾಯೋಜಕರುಗಳಿಂದ ಭರಿಸಲಾಗುವುದು.

ಋ) ಇಲ್ಲ

ೠ) 1995ರ ನವೆಂಬರ್ ಅಂತ್ಯದೊಳಗಾಗಿ

ಶ್ರೀ ರಾಮಲಿಂಗಾ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರವಲ್ಲಿರುವ ಹೋರಮಂಗಲದ ಬಳಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಹಾಗೂ ಖಾಸಗಿಯವರಿಂದ ಎಷ್ಟು ಹಣವನ್ನು ಪಡೆಯಲಾಗುವುದು ಎಂಬ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಕೇಂದ್ರ ಸರ್ಕಾರ ಇಷ್ಟು ಕೊಡುತ್ತದೆ, ರಾಜ್ಯ ಸರ್ಕಾರ ಇಷ್ಟು ಕೊಡುತ್ತದೆ, ಖಾಸಗಿಯವರು ಇಷ್ಟು ಕೊಡುತ್ತಾರೆ ಎಂದು ಸ್ಪಷ್ಟವಾಗಿ ಬಂದಿಲ್ಲ. ಜನರಲ್ ಆಗಿ 60 ಕೋಟಿ ರೂಪಾಯಿ ಖರ್ಚು ಆಗುತ್ತದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಎಷ್ಟು ಕೊಡುತ್ತದೆ ಮತ್ತು ಕೇಂದ್ರ ಸರ್ಕಾರ ಎಷ್ಟು ಕೊಡುತ್ತದೆ ಎಂದು ಸ್ಪಷ್ಟವಾಗಿ ಉತ್ತರ ಹೇಳಬೇಕು. ಒಳಾಂಗಣ ಕ್ರೀಡಾಂಗಣಕ್ಕೆ ಕೆಂಪೇಗೌಡ ಒಳಾಂಗಣ ಕ್ರೀಡಾಂಗಣವೆಂದು ನಾಮಕರಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ

ಎಂಬ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಹೇಳಿದ್ದಾರೆ. ಕೆಂಪೇಗೌಡ ಒಳಾಂಗಣ ಕ್ರೀಡಾಂಗಣವೆಂದು ಏಕೆ ಹೆಸರು ಇಡಬಾರದು? ಕ್ರೀಡಾಂಗಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂಬ ಪ್ರಶ್ನೆಗೆ ನವೆಂಬರ್ 95ರಲ್ಲಿ ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದಾರೆ. ಇನ್ನು 7-8 ತಿಂಗಳು ಇದೆ. ಇನ್ನೂ ಏನೂ ಕೆಲಸ ಕೂಡ ಪ್ರಾರಂಭ ಆಗಿಲ್ಲ, ಆದಷ್ಟು ಬೇಗ ಕೆಲಸ ಪ್ರಾರಂಭ ಆಗುತ್ತದೆಯೇ ಅವಧಿಯೊಳಗೆ ಕೆಲಸ ಮುಗಿಯುವ ಹಾಗೆ ಸರ್ಕಾರ ನೋಡಿಕೊಳ್ಳುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಅಜಯ್‌ಕುಮಾರ್ ಸರನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಈ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ತಗಲುವ ಒಟ್ಟು ಅಂದಾಜು ವೆಚ್ಚ 60 ಕೋಟಿ ರೂಪಾಯಿಗಳೆಂದು ಹೇಳಿದ್ದೇವೆ. ಇಂತಿಂಥ ಒಳಾಂಗಣ ಕ್ರೀಗಡಾಂಗಣಗಳಿಗೆ ಇಂತಿಷ್ಟೇ ಹಣ ವೆಚ್ಚವಾಗುತ್ತದೆಂದು ನಿರ್ದಿಷ್ಟವಾಗಿಲ್ಲ, ಇಲ್ಲಿ ನಡೆಯುವ ಕ್ರೀಡೆಗಳಿಗೆ ತಗಲುವ ವೆಚ್ಚದಲ್ಲಿ 10 ಕೋಟಿ ರೂಪಾಯಿಗಳನ್ನು ಕರ್ನಾಟಕ ಸರ್ಕಾರ ಒದಗಿಸಿದರೆ, ಇನ್ನು ಹತ್ತು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ನೆರವು ಬರುತ್ತದೆ ಉಳಿದ ಹಣವನ್ನು ಪ್ರಾಯೋಜಕರಿಂದ ಪಡೆದುಕೊಳ್ಳಬೇಕಾಗುತ್ತದೆ. ಅಲ್ಲದೆ, ಈ ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ ಒಳಾಂಗಣ ಕ್ರೀಡಾಂಗಣ'ವೆಂದು ನಾಮಕರಣ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದು, ಈ ಹೆಸರನ್ನು ಇಡುವುದರ ಬಗ್ಗೆ ನಿರ್ದಿಷ್ಟವಾಗಿ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ, ಏಕೆಂದರೆ, ಈ ಒಳಾಂಗಣ ಕ್ರೀಡಾಂಗಣಗಳಿಗೆ ನಾವು ಪ್ರಾಯೋಜಕರನ್ನು ಹುಡುಕುತ್ತಿದ್ದೇವೆ. ಒಂದು ವೇಳೆ ಈ ಕ್ರೀಡಾಂಗಣಕ್ಕೆ ಯಾರಾದರೂ ಪ್ರಾಯೋಜನ ಮಾಡಲು ಮುಂದೆ ಬಂದಂಥ ಸಂದರ್ಭದಲ್ಲಿ ಆಗ ತಾವು ಸೂಚಿಸಿರುವ ಹೆಸರನ್ನು ಕ್ರೀಡಾಂಗಣಕ್ಕೆ ಇಡುವಂಥ ಪರಿಸ್ಥಿತಿ ಬರಬಹುದು. ಈ ನಿಟ್ಟಿನಲ್ಲಿ ನಾವು ಈಗಾಗಲೇ ಕೆಲಸವನ್ನು ಶುರು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಸದರಿ ಒಳಾಂಗಣ ಕ್ರೀಡಾಂಗಣಕ್ಕೆ ಕೆಂಪೇಗೌಡರ ಹೆಸರನ್ನು ಇಡಲು ಯಾವ ಅಡ್ಡಿ ಆತಂಕವೇನೂ ಇಲ್ಲ, ಯಾರೋ ದಾನಿಗಳು ಮುಂದೆ ಬಂದರೆ ಅವರ ಹೆಸರನ್ನು ಕ್ರೀಡಾಂಗಣಕ್ಕೆ ಇಡಲು ಕಾಯುವ ಬದಲು ಕೆಂಪೇಗೌಡರ ಹೆಸರನ್ನು ಇಡುವುದೇ ಪರಮ ಶ್ರೇಷ್ಠವಾದುದಾಗಿರುವುದರಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿ.

ಶ್ರೀ ಅಜಯ್‌ಕುಮಾರ್ ಸರನಾಯಕ : ಒಳಾಂಗಣ ಕ್ರೀಡಾಂಗಣಕ್ಕೆ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಯಾವುದೇ ನಿರ್ದಿಷ್ಟವಾದ ನಿರ್ಣಯ ತೆಗೆದುಕೊಂಡಿಲ್ಲ, ತಾವು ಈ ಕುರಿತು ಏನು ಸಲಹೆ-ಸೂಚನೆಗಳನ್ನು ಕೊಟ್ಟಿದ್ದೀರಿ. ಇದನ್ನು ಪರಿಶೀಲಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಆ ಬಗ್ಗೆ ತಾವು ಭರವಸೆಯನ್ನಾದರೂ ಕೊಡಬಹುದಲ್ಲ.

ಶ್ರೀ ಅಜಯ್‌ಕುಮಾರ್ ಸರನಾಯಕ್ : ಅದರ ಬಗ್ಗೆ ಭರವಸೆ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರು ಒಳಾಂಗಣಕ್ಕೆ ಕೆಂಪೇಗೌಡರ ಹೆಸರನ್ನು ಇಡುವುದಿಲ್ಲವೆಂದು ಹೇಳಲಿಲ್ಲ, ಆದರೆ, ಆ ದಿಸೆಯಲ್ಲಿ ಯಾವುದೇ ನಿರ್ಧಾರ ಇನ್ನೂ ತೆಗೆದುಕೊಂಡಿಲ್ಲವೆಂದು ಮತ್ತು ತಾವು ಕೊಟ್ಟಿರುವ ಸಲಹೆ-ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಒಂದು ನಿರ್ಧಾರಕ್ಕೆ ಬರಲಾಗುವುದೆಂದು ಹೇಳಿದರು. ಅದೇ ಭರವಸೆ.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಸ್ಥಾಪಕನಾದ ಕೆಂಪೇಗೌಡರ ಹೆಸರನ್ನು ಒಳಾಂಗಣ ಕ್ರೀಡಾಂಗಣಕ್ಕೆ ನಾಮಕರಣ ಮಾಡಲು ಇಷ್ಟು ಜಿಜ್ಞಾಸೆ ಏಕೆ? ಇದರ ಬಗ್ಗೆ ಸಲಹೆ ಸೂಚನೆ ತೆಗೆದುಕೊಂಡು ಚರ್ಚಿಸುತ್ತೇವೆ. ಎಂದು ಹೇಳುವ ಬದಲಾಗಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಸಲಹೆ-ಸೂಚನೆಗಳನ್ನು

ತೆಗೆದುಕೊಂಡು ಪರಿಶೀಲಿಸುತ್ತೇವೆಂದು ಹೇಳುವ ಅವಶ್ಯಕತೆ ಬರುವುದಿಲ್ಲ. ಕಂಪೇಗೌಡರ ಹೆಸರನ್ನು ಒಳಾಂಗಣ ಕ್ರೀಡಾಂಗಣಕ್ಕೆ ನಾಮಕರಣ ಮಾಡುವಲ್ಲಿ ತಪ್ಪೇನಿದೆ? ಇದಕ್ಕೆ ಇಡೀ ಸದನ ಒಪ್ಪುತ್ತದೆ.

ಅಧ್ಯಕ್ಷರು : ಈ ರೀತಿ ದಿಢೀರ್ ನಿರ್ಣಯ ತೆಗೆದುಕೊಳ್ಳುವುದು ನಿಮ್ಮ ಕಾರ್ಯ ವಿಧಾನವಾದರೆ, ತಾವು ಕೊಟ್ಟ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಅದರ ಬಗ್ಗೆ ಆಲೋಚನೆ ಮಾಡಿ ಅನಂತರ ತೀರ್ಮಾನಕ್ಕೆ ಬರುವುದು ಮಂತ್ರಿಗಳ ಕಾರ್ಯ ವಿಧಾನವಾಗಿದೆ. ಏಕೆಂದರೆ, ಸರ್ಕಾರ ಅವರ ಕೈಯಲ್ಲಿದೆ. ನಿಮ್ಮ ಸಲಹೆಯನ್ನು ಅವರು ಗಮನದಲ್ಲಿಟ್ಟು ಕೊಂಡಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಕೋರಮಂಗಲದಲ್ಲಿ ರಾಷ್ಟ್ರೀಯ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ. ಮಂತ್ರಿಗಳಿಗೆ ನಾನು ಮೊದಲನೆಯದಾಗಿ ಪ್ರಶ್ನೆ ಕೇಳುವುದೇನೆಂದರೆ, ಒಳಾಂಗಣ ಕ್ರೀಡಾಂಗಣ ನಿರ್ಮಿಸುವ ಜಾಗದಲ್ಲಿ ಸುಮಾರು 50 ಸಾವಿರದಷ್ಟು ಕೊಳಚೆಗೇರಿ ನಿವಾಸಿಗಳು ವಾಸಿಸುತ್ತಿದ್ದು ಆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವುದು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಎರಡನೆಯ ಪ್ರಶ್ನೆಯೇನೆಂದರೆ, ಅಲ್ಲಿ ಫ್ಲಾಟ್‌ಗಳನ್ನು ಸಾಕುವುದಕ್ಕೋಸ್ಕರ ಖಾಸಗಿಯವರಿಗೆ ಸುಮಾರು ಐದು ಎಕರೆಷ್ಟು ಜಮೀನನ್ನು ಮಂಜೂರು ಮಾಡಟಿಕೊಟ್ಟಿದ್ದಾರೆ, ಇದರ ಬಗ್ಗೆ ಅವರು ಹೈಕೋರ್ಟಿನಲ್ಲಿ ರಿಟ್ ಹೋಗಿದ್ದಾರೆ.

ಅಧ್ಯಕ್ಷರು : ಶ್ರೀನಿವಾಸ್‌ರವರೆ, ನೀವು ನನ್ನ ಕಛೇರಿಗೆ ಬಂದು ಹೇಳಿದಾಗಲೂ ಒಪ್ಪಿಕೊಂಡೆ. ಇಲ್ಲಿ ಅವರು ಪ್ರಸ್ತಾಪಿಸಿರುವ ಪ್ರಶ್ನೆಗೂ ಮತ್ತು ನೀವು ಈಗ ಕೇಳುತ್ತಿರುವ ಪ್ರಶ್ನೆಯ ಸ್ವರೂಪವು ಬೇರೆಯಾಗಿರುವುದರಿಂದ ತಾವು ಮತ್ತು ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಕೇಳಿರುವ ಪ್ರಶ್ನೆಗಳು ನನ್ನ ಹತ್ತಿರವಿರುವುದರಿಂದ ಅದನ್ನು ಸೂಕ್ತ ಸಂದರ್ಭದಲ್ಲಿ ತೆಗೆದುಕೊಳ್ಳುತ್ತೇನೆ. ಅಲ್ಲದೆ, ನೀವು ನೋಟೀಸ್ ಕೊಡದೆ ಏಕಾಏಕಿ ಕೇಳಿದರೆ ಅದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಸಚಿವರು ಒದಗಿಸಿರುವ ಉತ್ತರದಲ್ಲಿ ತಿಳಿಸಿರುವಂತೆ ಕೋರಮಂಗಲ ಕ್ರೀಡಾಂಗಣವೆಂದು ಇದೆ.

ಅಧ್ಯಕ್ಷರು : ಕ್ರೀಡಾರಂಗಕ್ಕೆ ಸಂಬಂಧಿಸಿದಂತೆ ಅನೇಕ ಮುಖಗಳಿವೆ.

ಶ್ರೀ ಎಂ. ಶ್ರೀನಿವಾಸ್ : ಅವರು ತಮ್ಮ ಉತ್ತರದಲ್ಲಿ ಜಯನಗರವೆಂದು ಹೇಳಿದ್ದಾರೆ. ಮತ್ತೊಂದು ಜಯನಗರ ಈಜುಕೊಳ ಎಂದಿದೆ. ಕೋರಮಂಗಲವೆಂದು ತಿಳಿಸಿರಬೇಕಾದರೆ ನಾನು ಕೇಳುತ್ತಿರು ಪ್ರಶ್ನೆಯೂ ಸಹ ಅದೇ ಆಗಿದೆ ಮತ್ತು ಜಾಗವೂ ಅದೇ ಆದುದರಿಂದ ಅಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಆ ಜಾಗ ಸೂಕ್ತವಲ್ಲವೆಂದು ಹೇಳುತ್ತಾ ಅಲ್ಲಿ ಐವತ್ತು ಸಾವಿರ ಕೊಳಚೆಗೇರಿ ನಿವಾಸಿಗಳೀನಿದ್ದಾರೆ, ಅವರಿಗೆ ಪುನರ್ವಸತಿ ದೊರಕಿಸಿಕೊಡುವಲ್ಲಿ ಏನು ಕ್ರಮ ಕೈಗೊಂಡಿದ್ದೀರೆಂದು ತಿಳಿಸಲು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಅಜಯಕುಮಾರ್ ಸರನಾಯಕ್ : ನಾವು ಯಾವ ಜಾಗದಲ್ಲಿ ಒಳಾಂಣ ಕ್ರೀಡಾಂಗಣ ನಿರ್ಮಿಸುತ್ತಿದ್ದೇವೆಯೋ ಆ ಜಾದಲ್ಲಿ ಯಾವುದೇ ಕೊಳಚೆಗೇರಿ ಇಲ್ಲ, ವಸತಿಗಳಿಲ್ಲ, ಆ ಜಾಗ ಫ್ರೀ ಆಗಿದೆ.

ಶ್ರೀ ಎಂ. ಶ್ರೀನಿವಾಸ : ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಉಪನಾಯಕರುಗಳು ಸೇರಿದಂತೆ ನಾವೆಲ್ಲರೂ ಹೋಗಿ ಆ ಜಾಗವನ್ನು ನೋಡಿ ಬಂದಿದ್ದೇವೆ ಅಲ್ಲಿ 400 ಗುಡಿಸಲುಗಳಿದ್ದು, ಜಿಲ್ಲಾಧಿಕಾರಿಯವರು ಈ ಗುಡಿಸಲು

ಬಂದಿದ್ದೇವೆ ಅಲ್ಲಿ 400 ಗುಡಿಸಲುಗಳಿದ್ದು, ಜಿಲ್ಲಾಧಿಕಾರಿಯವರು ಈ ಗುಡಿಸಲು ನಿವಾಸಿಗಳಿಗೆಲ್ಲಾ ಸ್ಲಿಪ್ಸ್ ಕೊಟ್ಟಿದ್ದು, ಇವರಿಗೆಲ್ಲಾ ಬೇರೆ ಸ್ಥಳದಲ್ಲಿ ವಾಸಿಸಲು ಅವಕಾಶ ಕಲ್ಪಿಸಿಕೊಡಬೇಕೇ? ಬೇಡವೇ? ಎಂಬುದು ಇನ್ನೂ ಪರಿಶೀಲನೆಯಲ್ಲಿದೆ. ಆದರೆ ಅಲ್ಲಿ ಯಾವುದೇ ಕೊಳಚೆಗೇರಿ ಇಲ್ಲವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ಅವರು ಅಲ್ಲಿ ಹೋಗಿ ನೋಡಿಲ್ಲ. ಅವೊತ್ತು ಸ್ಥಳಕ್ಕೆ ಭೇಟಿ ನೀಡುವಾಗ ನಮ್ಮ ಜೊತೆ ಪತ್ರಕರ್ತರೆಲ್ಲಾ ಬಂದಿದ್ದರು ಮತ್ತು ಆ ಜಾಗದ ಒಂದು ಕಡೆ ರಸ್ತೆ ಇದ್ದು, ಸುಮಾರು 30 ವರ್ಷಗಳಿಂದ ಅಲ್ಲಿ 50 ಸಾವಿರ ಕೊಳಚೆ ನಿವಾಸಿಗಳು ವಾಸವಾಗಿದ್ದಾರೆ. ಆದರೆ. ಮಾನ್ಯ ಮಂತ್ರಿಗಳು ಅಲ್ಲಿ ಯಾವುದೇ ಕೊಳಚೆ ಪ್ರದೇಶ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಅಜಯ್‌ಕುಮಾರ್ ಸರನಾಯಕ್ : ಮಾನ್ಯ ಸದಸ್ಯರು ಹೇಳುತ್ತಿರುವಂತೆ ಕೊಳಚೆಗೇರಿ ಇರುವಂಥ ಜಾಗದಲ್ಲಿ ಹೌಸಿಂಗ್ ಕಾಂಪ್ಲೆಕ್ಸ್ ಬರುತ್ತದೆಯೇ ಹೊರತು ಕ್ರೀಡಾಂಗಣವಲ್ಲ. ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಟೆಂಡರ್‌ಗಳನ್ನು ಕರೆದು ವರ್ಕ್ ಆರ್ಡರ್ ಇಶ್ಯೂ ಮಾಡಿದ ನಂತರ ನಾನು ಆ ಸ್ಥಳವನ್ನು ಪರಿಶೀಲಿಸಿದ್ದು, ಎಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣವಾಗುತ್ತಿದೆಯೋ ಅಲ್ಲಿ ಯಾವುದೇ ತರಹದ ಕೊಳಚೆಗೇರಿ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿ ಒಳಾಗಂಣ ಕ್ರೀಡಾಂಗಣವನ್ನು ಕಟ್ಟುತ್ತಿರುವಂಥ ಸಂದರ್ಭದಲ್ಲಿ ಅಲ್ಲಿನ ವಸತಿಹೀನ ಜನರೆಲ್ಲರೂ ಮೊನ್ನೆ ದಿವಸ ಮೆರವಣಿಗೆಯಲ್ಲಿ ಬಂದು ಪ್ರತಿಭಟನೆ ಮಾಡಿ ಮತ್ತೆ ಪುನರ್ವಸತಿ ಕಲ್ಪಿಸಿಕೊಡಬೇಕೆಂಬ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಆದರೆ, ಅಲ್ಲಿ ಯಾರಿಗೂ ಸಹ ತೊಂದರೆಯಾಗಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ವಸತಿಹೀನರಾದವರಿಗೆ ಪುನರ್ವಸತಿ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು : ಕ್ರೀಡಾ ಸಮುಚ್ಚಯ ಬೇರೆ, ಕ್ರೀಡಾಂಗಣ ಬೇರೆ. ನೀವು ಕೇಳುತ್ತಿರುವ ಪ್ರಶ್ನೆ ವಸತಿ ಸಚಿವರಿಗೆ ಸಂಬಂಧಿಸಿದ್ದಾಗಿದೆ.

ಶ್ರೀ ಬಿ.ಆರ್. ಯಾವಗಲ್ : ಈ ಕ್ರೀಡಾಂಗಣದ ನಿರ್ಮಾಣದಲ್ಲಿ ಮೊದಲು ಕಂಠೀರವ ಕ್ರೀಡಾಂಗಣ ಎಂದು ಏನಿತ್ತು, ಅದನ್ನು ಒಡೆದು ಬೇರೆ ಕ್ರೀಡಾಂಗಣ ನಿರ್ಮಿಸುತ್ತಿದ್ದಾರೆ. ಮತ್ತು ಕೋರಮಂಗಲದಲ್ಲೂ ಸಹ ಹೊಸದಾಗಿ ಕ್ರೀಡಾಗಣ ನಿರ್ಮಾಣ ಮಾಡುವ ಕೆಲಸ ಕೈಗೆತ್ತಿಕೊಂಡಿದ್ದೇವೆಂದು ಸಚಿವರು ಹೇಳಿದ್ದಾರೆ. ಬೆಂಗಳೂರು ನಗರ ಬಹಳ ಕೊನೆಯಲ್ಲಿರುವುದರಿಂದ ಕ್ರೀಡಾಂಗಣಗಳ ನಿರ್ಮಾಣವನ್ನು ಹುಬ್ಬಳ್ಳಿಯಲ್ಲಿ, ಬೆಳಗಾವಿಯಲ್ಲಿ ಇಲ್ಲವೇ ಧಾರವಾಡದಲ್ಲಿ ಮಾಡಬಹುದಿತ್ತು. ಇಂತಹ ಕಡೆಗಳಲ್ಲಿ ಏಕೆ ನಿರ್ಮಾಣ ಮಾಡಿಲ್ಲವೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸುಗೆಗಳನ್ನು ಹೆಚ್ಚಿಸುವ ಬಗ್ಗೆ.

156 - ಶ್ರೀ ಶಿವಾನಂದ. ಎಸ್. ಪಾಟೀಲ್ (ತಿಕೋಟೆ) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿನ ಹಾಸಿಗೆಗಳನ್ನು ಹೆಚ್ಚಿಸುವ ಪ್ರಸ್ತಾಪನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ?*
2. *ಮುಖ್ಯ ಆಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಧಾರವಾಡ ಇವರು ಆಡಳಿತಾತ್ಮಕ ಮಂಜೂರಾತಿಯಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ*